# ಅಪ್ಪು ಭೇಟಿ; ಅಚ್ಚಳಿಯದ ನೆನಪು



ಕನ್ನಡದ ಸೂಪರ್‌ಸ್ಟಾರ್ ಪುನೀತ್ ರಾಜಕುಮಾರ್ ನನ್ನ ನೆಚ್ಚಿನ ನಟ. ಅವರನ್ನು ಹತ್ತಿರದಿಂದ ನೋಡಿ ಮಾತನಾಡಬೇಕು ಎಂದು 13 ವರ್ಷಗಳ ಹಿಂದೆ ಕಂಡಿದ್ದ ಕನಸು, ಈಗ್ಗೆ ಆರು ವರ್ಷಗಳ ಹಿಂದೆ ನನಸಾಗಿತ್ತು. ಆ ಸವಿನೆನಪು ಎಂದೆಂದಿಗೂ ಜೀವನಕ್ಕೆ ಸ್ಫೂರ್ತಿ.

■ ಗೀತಾ ಭಟ್, ಶಿವಮೊಗ್ಗ

ಕೆಲವೊಮ್ಮೆ ನಮ್ಮ ನೆಚ್ಚಿನ ನಾಯಕರನ್ನೋ, ನಟರನ್ನೋ, ಹಿರಿಯ ವಿದ್ವಾಂಸರನ್ನೋ, ಸಾಹಿತಿಗಳನ್ನೋ ನೋಡಬೇಕು, ಅವರ ಬಳಿ ಮಾತನಾಡಿ, ಫೋಟೊ ಕ್ಲಿಕ್ಕಿಸಿಕೊಳ್ಳಬೇಕು ಎಂಬ ತವಕ ಇರುತ್ತದೆ. ಈ ಸುವರ್ಣ ಅವಕಾಶಕ್ಕಾಗಿ, ಸಂದರ್ಭಕ್ಕಾಗಿ ಎಷ್ಟು ವರ್ಷ ಬೇಕಾದರೂ ಕಾಯಲು ಸಿದ್ಧರಿರುತ್ತೇವೆ. ಈ ಕನಸು ನನಸಾದಾಗ ಎಲ್ಲಿಲ್ಲದ ಸಂಭ್ರಮ, ಹಿಗ್ಗು ಮನದೊಳಗೆ. ಅಂಥ ಅವಕಾಶ ನನಗೂ ಒದಗಿ ಬಂದಿದ್ದು, ಸುಮಾರು ಹದಿಮೂರು ವರ್ಷಗಳ ಹಿಂದಿನ ಕನಸು ನನಸಾಗಿದೆ.

ಅದು ಪುನೀತ್ ರಾಜಕುಮಾರ್ ಅವರನ್ನು ಹತ್ತಿರದಿಂದ ನೋಡಬೇಕು, ಮಾತನಾಡಬೇಕು ಎಂಬ ಕನಸು. ಈ ನೆಚ್ಚಿನ ನಟನನ್ನು ಸಿನಿಮಾ ಪರದೆಯ ಮೇಲೆ ನೋಡಿದಾಗ ನಿಜಜೀವನದಲ್ಲೂ ನೋಡಬೇಕು ಎಂಬ ಕನಸು ಹೊತ್ತಿದ್ದೆ. ಆ ಅವಕಾಶ ಒದಗಿ ಬಂದಾಗ ನಿಜವಾಗಿಯೂ ಪುಳಕಿತಳಾದೆ. ಟೀವಿಯ ಸುವರ್ಣ ಚಾನಲ್ ಕನ್ನಡ ಕೋಟ್ಯಾಧಿಪತಿ ಕಾರ್ಯಕ್ರಮ ಆಯೋಜಿಸಿತ್ತು. ಇದು ನಡೆದದ್ದು 2013ರ ಮೇ ತಿಂಗಳಿನಲ್ಲಿ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ನಾನು ಆಯ್ಕೆಯಾಗಿದ್ದೇನೆ ಎಂದು ಅಲ್ಲಿಂದ ಕರೆ ಬಂತು. ಪುನೀತ್ ಅನ್ನು ನೋಡಬೇಕು ಎಂದು ಇಷ್ಟು ವರ್ಷಗಳಿಂದ ಕಾಯುತ್ತಾ ಕುಳಿತು ಈಗ ನನಸಾಗುವ ಕಾಲ ಸನ್ನಿಹಿತವಾಗಿದೆ ಎಂದಾಗ ನನಗೆ ತೀರಲಾರದ ಸಂತೋಷ ಮತ್ತು ಮನಸ್ಸಿನಲ್ಲಿ ಏನೋ ತಳಮಳವೂ ಉಂಟಾಗಿತ್ತು.

ಹಾಗೆಂದು ನನಗೆ ಡಾ. ರಾಜಕುಮಾರ್ ಅವರನ್ನೇ ಹತ್ತಿರದಿಂದ ನೋಡಿ ಮಾತಾಡಿಸಬೇಕೆಂಬ ತುಂಬ ಆಸೆಯಿತ್ತು. ಅದು ಸಾಧ್ಯವಾಗಲಿಲ್ಲ. ಅದಕ್ಕೆ ಆ ದೇವರೇ ನನಗೆ ಪುನೀತ್‌ರಾಜ್‌ಕುಮಾರ್ ಅವರನ್ನು ಭೇಟಿ ಮಾಡಲು ಈ ಅವಕಾಶ ಮಾಡಿಕೊಟ್ಟಿದ್ದಾನೆ ಎಂದೂ ಅನಿಸದೇ ಇರಲಿಲ್ಲ. ಪುನೀತ್ ಬಾಲನಟ ಆಗಿದ್ದಾಗಿನಿಂದಲೂ ಅವರ ಚಿತ್ರಗಳನ್ನು ನೋಡಿ ನಾನು ಅವರ ಅಭಿಮಾನಿಯಾಗಿದ್ದೆ. ಅವರು ನಟಿಸಿದ ಮಿಲನ, ಆಕಾಶ್ ಮತ್ತು ಅರಸು ಸಿನಿಮಾಗಳನ್ನು ನೋಡಿ ತುಂಬ ಪ್ರಭಾವಿತಳಾಗಿದ್ದೆ. ಅದರಲ್ಲು ಅರಸು ನಾನು ತುಂಬ ಇಷ್ಟಪಟ್ಟ ಚಿತ್ರ. ಹಾಗಾಗಿ ಅವರನ್ನು ಭೇಟಿಯಾಗುವ ಯೋಗ ಬಂದಾಗ ತುಂಬ ಖುಷಿಯಾಯಿತು, ಜೊತೆಗೆ ಆತ ಕನ್ನಡದ ಸೂಪರ್ ಸ್ಟಾರ್. ಅವರು ಹೇಗೆ ನಡೆದುಕೊಳ್ತಾರೊ ಎನ್ನುವ ಭಯವೂ ಇತ್ತು.

ಅದು 2013ರ ಮೇ 21. ಅಂದು ನನ್ನ ಭಾಗದ ಚಿತ್ರೀಕರಣ ಇತ್ತು. ಆ ಇಡೀ ಚಿತ್ರೀಕರಣದಲ್ಲಿ ನಾನವರ ಜೊತೆ ಮಾತಾಡಿದ್ದು ಬರೀ ಆ ಕಾರ್ಯಕ್ರಮಕ್ಕೆ ಸಂಬಂಧಪಟ್ಟಿದ್ದಷ್ಟೆ. ಅದರಲ್ಲಿ ಜೋಕ್‌ಗಳು ಬಂದಾಗ ಆತ ನಕ್ಕ ನಗುವಿನಲ್ಲಿ ಅವರು ಚಿಕ್ಕ ಹುಡುಗನಾಗಿದ್ದಾಗ ನಗುತ್ತಿದ್ದ ನಗುವಿನ ಮುಗ್ಧತೆಯೆ ಇತ್ತು. ಮತ್ತು ನನ್ನ ಕಷ್ಟಗಳ ವಿಷಯ ಬಂದಾಗ ಅದನ್ನು ಗಂಭೀರವಾಗಿ ಕೇಳಿ ನಾನದನ್ನು ಎದುರಿಸಿದ ಬಗೆಗೆ ಆಶ್ಚರ್ಯ ವ್ಯಕ್ತಪಡಿಸಿದ್ದು ನನಗೆ ಮರೆಯಲು ಸಾಧ್ಯವಿಲ್ಲ.

ಆ ಇಡೀ ಕಾರ್ಯಕ್ರಮದಲ್ಲಿ ಒಂದು ಆತ್ಮೀಯತೆಯ ವಾತಾವರಣವಿತ್ತು. ಅವರನ್ನು ನಾನು ತೀರಾ ಹತ್ತಿರದಿಂದ ಬಲ್ಲವಳಲ್ಲ. ಆದರೂ ಆ ಮಾತಿನಲ್ಲಿದ್ದ ಆತ್ಮೀಯತೆ ಮರೆಯಲು ಸಾಧ್ಯವಿಲ್ಲ. ನನಗಷ್ಟೇ ಅಲ್ಲ; ಆ ಸೆಟ್‌ನಲ್ಲಿದ್ದ ಎಲ್ಲರನ್ನು ಆತ ಗೌರವಯುತವಾಗಿ ನಡೆಸಿಕೊಳ್ಳುತ್ತಿದ್ದ ರೀತಿ ನನಗೆ ತುಂಬ ಇಷ್ಟವಾಯಿತು. ಈಗ ಇದೆಲ್ಲ ನಡೆದು ಆರು ವರ್ಷಗಳೇ ಕಳೆದಿವೆ. ಮತ್ತೆ ಪುನೀತ್ ಅವರನ್ನು ನಾನು ಮುಖತಃ ಭೇಟಿ ಮಾಡುತ್ತೇನೊ ಇಲ್ಲವೋ ಗೊತ್ತಿಲ್ಲ. ಆದರೆ ಸಿನಿಮಾಗಳಲ್ಲಿ ನೋಡುತ್ತಲೇ ಇರುತ್ತೇನೆ. ಅವರೊಂದಿಗೆ ಕಳೆದ ಕ್ಷಣಗಳನ್ನು ಮೆಲುಕು ಹಾಕುತ್ತಾ. ■